## ಮಕ್ಕಳೇ ನಾಟಕ ಬರೆದಿದ್ದರೆ...

ಪ್ರಸ್ತುತ ಝೀ ಕನ್ನಡದಲ್ಲಿ ಪ್ರಸಾರವಾಗುವ ಡ್ರಾಮಾ ಜೂನಿಯರ್ಸ್ ವೀಕ್ಷಕರ ಮನ ಗೆಲ್ಲುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಪುಟ್ಟ ಮಕ್ಕಳು ನಾಟಕಗಳ ಡೈಲಾಗ್‌ಗಳನ್ನು ನೆನಪಿಟ್ಟು ಹೇಳುವುದು ಜೊತೆಗೆ ಅದಕ್ಕೆ ತಕ್ಕ ಭಾವನೆಯನ್ನು ತೋರಿಸುವುದು ಅದ್ಭುತ. ಇಂಥ ನಾಟಕಗಳನ್ನು ಮಕ್ಕಳೇ ಸ್ವತಃ ರೂಪಿಸಿ, ನಿರ್ದೇಶನ ಮಾಡುವಂತಿದ್ದರೆ ಅವರ ಕಲ್ಪನಾಶಕ್ತಿ ಇನ್ನಷ್ಟು ಅರಳುವುದಕ್ಕೆ ಮತ್ತಷ್ಟು ಪ್ರತಿಭೆಗಳು ಹೊರಬರುವುದಕ್ಕೆ ಅನುಕೂಲ ಆಗುತ್ತಿತ್ತು ಎಂದೆನಿಸುತ್ತದೆ.

—ಕಲ್ಪನಾ ಪಿ. ಹೆಗಡೆ, ಸೋಮನಳ್ಳಿ ಶಿರಸಿ

## ಯಾರು ಮೂರ್ಖರು ಈ ಮೂವರೊಳಗೆ

ಕನ್ನಡ ಕಲರ್ಸ್‌ನ 'ರಾಧಾ ರಮಣ'ದಲ್ಲಿ ರಮಣ ಒಂದು ಕಂಪನಿಯ ಮುಖ್ಯಸ್ಥ. ಅವನಿಗೆ ಸ್ವಂತ ಬುದ್ಧಿ ಇಲ್ಲದಂತೆ ವರ್ತಿಸುತ್ತಾನೆ. ತನ್ನ ಅತ್ತೆಯ ಕುತಂತ್ರ ಅವನಿಗೆ ಅರಿವಾಗುವುದೇ ಇಲ್ಲ. ತಾನು ಪ್ರೀತಿಸುವ ರಾಧಳ ಬಗ್ಗೆ ಸಂಶಯ ಪಡುವುದು, ದ್ವೇಷಿಸುವುದು ಇವನಿಗೆ ಮಾಮೂಲು, ತಲೆಯೇ ಇಲ್ಲದ ಈ ವ್ಯಕ್ತಿ ಒಂದು ಕಂಪನಿಯ ಮುಖ್ಯಸ್ಥ ಆಗುವುದಕ್ಕೆ ನಾಲಾಯಕ್ಕೂ. ಅವನಿಗೆ ತಂದೆ ಅನ್ನಿಸಿಕೊಂಡವರು ಮನೆಯಲ್ಲಿ ಇರುವವಳು ಅವನ ಅಲ್ಲ. ಅದು ಸೀತಾರ ಕುತಂತ್ರ ಎಂದು ಹೇಳಲು ಈ ಜನ್ಮದಲ್ಲಿ ಸಾಧ್ಯವಿಲ್ಲ. ನಿಜ ತಿಳಿದರೆ ಸೀತಾರ ಅವನಿಯನ್ನು ಸಾಯಿಸಲು ಸಾಧ್ಯವೇ ಇಲ್ಲ. ಇಷ್ಟು ಆಗುವುದಕ್ಕೆ ಇನ್ನು ಎಷ್ಟು ವರ್ಷ ಕಾಯಬೇಕು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಹಳಿ ತಪ್ಪಿದ ಗೌರಿ, ಲಕ್ಷ್ಮಿ

ಕಲರ್ಸ್‌ನ 'ಪುಟ್ಟ ಗೌರಿ ಮದುವೆ' ಮತ್ತು 'ಲಕ್ಷ್ಮಿ ಬಾರಮ್ಮ' ಪ್ರಾರಂಭಿಕ ಹಂತದಲ್ಲಿ ಗಮನ ಸೆಳೆದಿದ್ದವು. ಈಗ ಕಥೆ ಹಳಿ ತಪ್ಪಿದ ರೈಲಿನಂತಾಗಿದೆ. ಅನವಶ್ಯಕವಾಗಿ ಸೇರಿಸಿದ ಸನ್ನಿವೇಶಗಳು ಕಿರಿಕಿರಿ ಉಂಟುಮಾಡುತ್ತಿವೆ. ಎರಡೂ ಧಾರಾವಾಹಿಗಳನ್ನು ಆದಷ್ಟು ಬೇಗ ಅಂತ್ಯಗೊಳಿಸುವುದು ಉತ್ತಮ.

—ಕೆ.ಎಸ್. ವಿಠ್ಠಲ್ ರಾವ್, ಬೆಂಗಳೂರು

## ಮಾದರಿ ಮಹಿಳೆ

ಸುಬ್ಬಲಕ್ಷ್ಮಿ ಬಿಡುಗಡೆ ಪತ್ರಕ್ಕೆ ಸಹಿ ಹಾಕಬೇಕೆನ್ನುವಷ್ಟರಲ್ಲಿ ಅವಳ ಅತ್ತೆ —ಮಾವ ಬಂದು ಸಹಿ ಹಾಕು. ಇಂಥ ಗಂಡನೊಡನೆ ಬಾಳುವುದಕ್ಕಿಂತ ನಮ್ಮೊಡನೆ ಇದ್ದು ಬಿಡು ನಾವು ನಿನ್ನನ್ನು ಮಗಳ ರೀತಿ ಚೆನ್ನಾಗಿ ನೋಡಿಕೊಳ್ಳುವುತ್ತೇವೆ ಎಂದು ಹೇಳಿದರು. ಆಗಿನ ಅವರ ವೇದನೆ ಸುಬ್ಬಲಕ್ಷ್ಮಿ ವೇದನೆ ಎಂಥವರಿಗೂ ಕಣ್ಣೀರು ಬರುವಂಥದ್ದು. ಎಷ್ಟೇ ಕಷ್ಟ ಬಂದರೂ ಗಂಡನನ್ನು ಬಿಡುವುದು ಸಾಧ್ಯವಿಲ್ಲ ಇದು ಭಾರತೀಯ ಸಂಸ್ಕೃತಿ. ಸುಬ್ಬಲಕ್ಷ್ಮಿ ಗಂಡನ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ನಗು ನಗುತ್ತಾ ಇದ್ದಳು. ಇದು ಮಹಿಳೆಯ ಲಕ್ಷಣ. ಮಹಿಳೆ ಅಲ್ಲ ಮಹಾ ಇಳೆ. ಅಂದರೆ ಭೂಮಿಯಷ್ಟು ಸಹನಾ ಗುಣ. ಇದನ್ನು ಗಂಡಸರು ಅರ್ಥ ಮಾಡಿಕೊಳ್ಳುವುದಿಲ್ಲ.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

ವಾರದ ಪತ್ರ

## ಜಾನಕಿಯ ಇಬ್ಬಂದಿತನ

ಸತ್ಯವನ್ನು ಮುಚ್ಚಿಡಬಾರದೆಂದು ತನ್ನ ಗಂಡ ಐಎಎಸ್ ಅಧಿಕಾರಿ ಎಂದು ಸುಳ್ಳು ಹೇಳಿದ್ದನೆಂದು ಎಸ್‌ಪಿ ಆನಂದ್ ಮುಂದೆ ಜಾನಕಿ ಹೇಳಿಕೆ ನೀಡುತ್ತಾಳೆ. ತನ್ನ ತಂದೆ ಭಾರ್ಗಿಯ ಕೈವಾಡ ಅದರಲ್ಲಿದೆ ಎಂಬ ನಿರಂಜನನ ಮಾತಿನಲ್ಲಿ ಆಕೆಗೆ ನಂಬಿಕೆ ಇರದ ಕಾರಣ ಭಾರ್ಗಿ ಹೆಸರನ್ನು ಪೊಲೀಸರಿಗೆ ಹೇಳಬಾರದೆಂದು ಮಾತು ತೆಗೆದು ಕೊಳ್ಳುತ್ತಾಳೆ. ನಂತರ ತನ್ನ ತಾಯಿ ರಶ್ಮಿಗೆ ಸತ್ಯ ತಿಳಿದಿತ್ತೆಂದು ನಿರಂಜನ ಹೇಳಿಕೆ ಕೊಟ್ಟಿರುವುದು ತಿಳಿದು ಬೇಸರ ವ್ಯಕ್ತ ಪಡಿಸುತ್ತಾಳೆ. ಸತ್ಯ ಮುಚ್ಚಿಡಬಾರದೆಂಬ ಜಾನಕಿಯ ಈ ನಡೆ ಅವಳ ಇಬ್ಬಂದಿತನವನ್ನು ತೋರಿಸುತ್ತದೆ.

ಜಾನಕಿಯ ನಡೆಯಿಂದ ಅವಳ ಉದ್ದೇಶ, ಜೀವನದ ಗುರಿ ಏನೆಂಬುದು ಅವಳಿಗೂ ನಿರ್ದೇಶಕರಿಗೂ ತಿಳಿದಂತೆ ಕಾಣುತ್ತಿಲ್ಲ. ಕುತೂಹಲ ಹುಟ್ಟಿಸಿದ್ದ ಧಾರಾವಾಹಿಯ ಆಮೆ ನಡಿಗೆ ನಿರಾಸೆ ತಂದಿದೆ.

—ಗೀತಾ ನೆಲ್ಲೀಕಾಯಿ, ಬೆಂಗಳೂರು

## ವಾಹಿನಿಗಳಿಗೊಂದು ಸಲಾಂ

ತುಮಕೂರು ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾದ ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾದ ವಿವರ, ಕ್ರಿಯಾ ಸಮಾಧಿಯಾಗುವವರೆಗಿನ ಸಕಲ ವಿಧಿ ವಿಧಾನಗಳನ್ನು ನೇರ ಪ್ರಸಾರ ಮಾಡಿ ವಾಹಿನಿಗಳು ತಮ್ಮ ಗೌರವವನ್ನು ಹೆಚ್ಚಿಸಿಕೊಂಡಿವೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ನಿರಾಸೆ ಮೂಡಿಸುವ ಸಿನಿಮಾ

ಕನ್ನಡದ ಸಿನಿಮಾ ಪ್ರಸಾರ ಮಾಡುತ್ತಿರುವ ಚಿತ್ರ ವಾಹಿನಿಗಳು ಇತ್ತೀಚಿನ ದಿನಗಳಲ್ಲಿ ಬೇಸರ ಮೂಡಿಸುತ್ತಿವೆ. ಆರಂಭದಲ್ಲಿ ಇರುವ ಆಸಕ್ತಿ ನಂತರ ಇರುವುದಿಲ್ಲ. ಅಲ್ಲದೇ ಹಾಕಿದ ಚಲನಚಿತ್ರಗಳನ್ನು ಸಮಯ ಬದಲಾವಣೆ ಮಾಡಿ ಪುನಃ ಪುನಃ ಪ್ರಸಾರ ಮಾಡುತ್ತಿವೆ. ಅಲ್ಲದೇ ಇವು ಪ್ರಸಾರ ಮಾಡುತ್ತಿರುವ ಸಮಯ ಕೂಡ ವೀಕ್ಷಕರಿಗೆ ಹೊಂದಾಣಿಕೆ ಆಗುವುದಿಲ್ಲ.

—ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

## ಅನನ್ಯ ಅಪ್ಪ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯಲ್ಲಿ ಒಬ್ಬ ತಂದೆಗೆ ಮಗಳ ಬಾಳು ಕಣ್ಣೆದುರೇ ಮಣ್ಣುಗೂಡುತ್ತಿರುವುದನ್ನು ನೋಡಿಯೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯ ಬಗ್ಗೆ ಉಕ್ಕುವ ಸಾತ್ವಿಕ ಕ್ರೋಧ, ಹತಾಶೆ, ನೋವುಗಳನ್ನು ಸೀತಾರಾಂ ಅಭಿವ್ಯಕ್ತಿಸಿರುವ ಪರಿ ಅನನ್ಯ.

ಆತ್ಮೀಯ ಸಂಬಂಧಗಳು ಕೆಡುವಂತಹ ವಿಕೋಪ ಸ್ಥಿತಿಯಲ್ಲಿ, ಬಿರುನುಡಿಗಳೊಡನೆ ಸಮಯೋಚಿತ ಸಾಂತ್ವನವನ್ನೂ ನೀಡಿ ಅಣ್ಣನ ಸಿಟ್ಟನ್ನು ತಣಿಸಿ, ಪರಿಸ್ಥಿತಿಯನ್ನು ತಿಳಿಗೊಳಿಸುವ ಮಾತೃ ಹೃದಯಿ ಶ್ಯಾಮಲ ಪಾತ್ರಕ್ಕೆ ಜೀವ ತುಂಬಿರುವ ಸುಧಾ ಬೆಳವಾಡಿಯವರ ಅಭಿನಯವೂ ಹೃದಯಂಗಮ.

—ಮೀರಾ ಮೋಹನ್, ಕ್ಯಾಲಿಫೋರ್ನಿಯ

ಸಾಧ್ವಿ ಜಾನಕಿ: 'ಮಗಳು ಜಾನಕಿ'ಯನ್ನು ನೋಡುತ್ತಿದ್ದರೆ ಮಗಳು ಜಾನಕಿ ಎನ್ನುವುದಕ್ಕಿಂತ ಸಾಧ್ವಿ ಜಾನಕಿ, ಸತಿ ಜಾನಕಿ ಅಥವಾ ಸಹ ಧರ್ಮಿಣಿ ಜಾನಕಿ ಎಂದು ಕರೆಯುವುದು ಸೂಕ್ತ ಎಂದು ಕಾಣುತ್ತಿದೆ.

—ಡಾ. ಕೆ.ಆರ್. ಶೈಲಜಾ, ಮೈಸೂರು

## ಶುಭೋದಯದ ಘನತೆ ಉಳಿಯಲಿ!

ಚಂದನ ವಾಹಿನಿಯ 'ಶುಭೋದಯ ಕರ್ನಾಟಕ'ದ ಮೂಲ ಉದ್ದೇಶ ಸಾಧಕರ ಜತೆ ಸಂವಾದ ಮಾಡುವುದು. ಆಹ್ವಾನಿತ ಗಣ್ಯರ ಜೀವನದಲ್ಲಿ ಕಲಿಯಬೇಕಾದ ಪಾಠ ಇರುತ್ತದೆ. 'ಬಿಗ್ ಬಾಸ್' ಮನೆಯಲ್ಲಿ ಕೆಲವು ವಾರಗಳ ಕಾಲ ಕಳೆದು, ಸ್ವಂತ ವ್ಯಕ್ತಿತ್ವವನ್ನೇ ಬದಲಾಯಿಸಿಕೊಂಡು ವಿಫಲರಾದವರನ್ನು ಆಮಂತ್ರಿಸಿದರೆ ಹೇಗೆ? ಅವರಿಂದ ಸಮಾಜಕ್ಕೆ ಯಾವ ಸಂದೇಶ ನೀಡುತ್ತಿದ್ದಾರೋ ತಿಳಿಯದಾಗಿದೆ. ಚಂದನ ವಾಹಿನಿ ಕಾರ್ಯಕ್ರಮಗಳು ದಾರಿ ತಪ್ಪುವಂತೆ ಆಗಬಾರದು. ಅದಕ್ಕೆ ಆಸ್ಪದ ನೀಡುವುದು ಬೇಡ!

—ರಾಜೀವ್ ಎನ್. ಮಾಗಲ್ ಸಕಲೇಶಪುರ

ಹೃದಯ ಕಲಕಿತು: ಶುಭೋದಯ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಅಂಧಗಾಯಕ ವೇಣುಗೋಪಾಲ ಅವರ ಗಾಯನ, ಸಂದರ್ಶನ ಹೃದಯ ಕಲಕಿತು. ಸುಮಧುರವಾಗಿ ಹಾಡುವ ಅವರ ಸಾಧನೆ ಅನನ್ಯ. ಹೆಣ್ಣನ್ನು ಪೂಜನೀಯ ಮಾತೃ ಭಾವನೆಯಲ್ಲಿ ಭಾವಿಸುವ ಅವರ ನುಡಿ ಶ್ಲಾಘನೀಯ.

—ಸುಲೋಚನಾ ವಾದಿರಾಜ್, ಹೊಳೆಹೊನ್ನೂರು